ಅ) ಖಾಲಿ ಇರುವ ಹುದ್ದೆಗಳು ಎಷ್ಟು? ಯಾವಾಗ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಡಾ॥ ಎಂ. ಶಂಕರ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಕೆ.ಎಂ.ಸಿ. ಹುಬ್ಬಳ್ಳಿಗೆ ಮತ್ತು ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ 1994-95ನೇ ಸಾಲಿನಲ್ಲಿ ಯಾವುದೇ ಹುದ್ದೆಗಳು ಮಂಜೂರು ಆಗಿಲ್ಲ.

ಆ) ಕೆ.ಎಂ.ಸಿ. ಹುಬ್ಬಳ್ಳಿಯಲ್ಲಿ 84 ಹುದ್ದೆಗಳು ಖಾಲಿ ಇವೆ. ಈಗ ಕೆ.ಎಂ.ಸಿ.ಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆಯಾಗಿ ಹೆಸರಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ಖಾಲಿ ಇರುವ ಹುದ್ದೆಗಳನ್ನು ಈ ಸಂಸ್ಥೆಯ ನಿರ್ದೇಶಕರೆ ಈ ಸಂಸ್ಥೆಯ ಆಡಳಿತ ಮಂಡಳಿಯ ಒಪ್ಪಿಗೆ ಪಡೆದು ಭರ್ತಿ ಮಾಡಿಕೊಳ್ಳಬಹುದಾಗಿದೆ.

ವಿಕ್ಟೋರಿಯಾ ಆಸ್ಪತ್ರೆ ಬೆಂಗಳೂರು ಇಲ್ಲಿ 82 ಹುದ್ದೆಗಳು ಖಾಲಿ ಇದ್ದು ಇವುಗಳನ್ನು ಭರ್ತಿ ಮಾಡಲು ವಿವಿಧ ಹಂತದಲ್ಲಿ ಕ್ರಮ ಜರುಗಿಸಲಾಗಿದೆ. ಕೆಲವು ಹುದ್ದೆಗಳನ್ನು ಕೆಳಹಂತದ ಹುದ್ದೆಗಳಿಂದ ಭರ್ತಿ ನೀಡುವುದರ ಮೂಲಕ ಭರ್ತಿ ಮಾಡಲಾಗುವುದು.

ಜಿಲ್ಲಾವಾರು ಸರ್ಕಾರಿ ಆಸ್ಪತ್ರೆಗಳು.

2128- ಶ್ರೀ ಅಶೋಕ್ ಎಸ್.ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಸರ್ಕಾರಿ ಆಸ್ಪತ್ರೆಗಳೆಷ್ಟು? ಅವುಗಳಲ್ಲಿ ಎಷ್ಟು ಬೆಡ್‌ಗಳಿವೆ? ಇನ್ನೂ ಎಷ್ಟು ಬೆಡ್‌ಗಳುಳ್ಳ ಆಸ್ಪತ್ರೆಗಳನ್ನು ಎಲ್ಲೆಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ)

1) ರಾಜ್ಯದಲ್ಲಿ ಒಟ್ಟು 2281 ಸರ್ಕಾರಿ ಆಸ್ಪತ್ರೆಗಳಿವೆ.

2) ಅವುಗಳಲ್ಲಿ ಒಟ್ಟು 37,357 ಹಾಸಿಗೆಗಳಿವೆ. ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸಲ್ಲಿಸಲಾಗಿದೆ.

3) ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 6 ಹಾಸಿಗೆಗಳ ಸೌಲಭ್ಯಗಳನ್ನು ಒದಗಿಸಲಾಗುವುದು. ಸಮುದಾಯ ಆರೋಗ್ಯ ಕೇಂದ್ರದಲ್ಲಿ 30 ಹಾಸಿಗೆಗಳ ಸೌಲಭ್ಯಗಳನ್ನು ಒದಗಿಸಲಾಗುವುದು. 1996-97ನೇ ಸಾಲಿನಲ್ಲಿ ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಸ್ಥಳಗಳ ಬಗ್ಗೆ ಇನ್ನೂ ನಿರ್ಧರಿಸಿರುವುದಿಲ್ಲ.

4) ವಿಶ್ವಬ್ಯಾಂಕ್ ಸಹಾಯದಿಂದ ಹಮ್ಮಿಕೊಳ್ಳಲಾಗಿರುವ ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಜರ್ಮನಿಯ ಕೆ.ಎಫ್.ಡಬ್ಲ್ಯೂ. ಸಹಾಯದಿಂದ ಗುಲ್ಬರ್ಗಾ ವಿಭಾಗದಲ್ಲಿ ಮತ್ತು ಒಪೆಕ್ ಸಹಾಯದಿಂದ ಅಭಿವೃದ್ಧಿಪಡಿಸಲಾಗುತ್ತಿರುವ ರಾಯಚೂರು ಜಿಲ್ಲಾ ಆಸ್ಪತ್ರೆಯು ಸೇರಿದಂತೆ ರಾಜ್ಯದಲ್ಲಿ ಒಟ್ಟು 354

ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿ, ಒಟ್ಟು 5119 ಹೆಚ್ಚುವರಿ ಹಾಸಿಗೆಗಳನ್ನು ಒದಗಿಸುವ ಉದ್ದೇಶವನ್ನು ಹೊಂದಲಾಗಿದೆ.

ರಾಜ್ಯದಲ್ಲಿರುವ ಸರ್ಕಾರಿ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳು ಮತ್ತು ಹಾಸಿಗೆ ಸಂಖ್ಯೆಗಳ ವಿವರ (ಜಿಲ್ಲಾವಾರು) ಪಟ್ಟಿ.

ಕ್ರಮ ಸಂಖ್ಯೆ	ವಿಭಾಗ ಮತ್ತು ಜಿಲ್ಲೆಯ ಹೆಸರು	ಆಸ್ಪತ್ರೆಗಳು		ಪ್ರಾ.ಆ.ಕೇಂದ್ರ		ಪ್ರಾ.ಆ.ಘ		ಒಟ್ಟು	
		ಸಂಸ್ಥೆಗಳು	ಹಾಸಿಗೆಗಳು	ಸಂಸ್ಥೆಗಳು	ಹಾಸಿಗೆಗಳು	ಸಂಸ್ಥೆಗಳು	ಹಾಸಿಗೆಗಳು	ಸಂಸ್ಥೆಗಳು	ಹಾಸಿಗೆಗಳು
ಬೆಂಗಳೂರು ವಿಭಾಗ									
1)	ಬೆಂಗಳೂರು	12	4327	29	390	42	35	83	4752
2)	ಬೆಂಗಳೂರು (ಗ್ರಾ)	4	210	68	737	29	26	101	973
3)	ಚಿತ್ರದುರ್ಗ	7	1665	81	906	49	6	137	2477
4)	ಕೋಲಾರ	10	1127	74	708	37	61	121	1896
5)	ಶಿವಮೊಗ್ಗ	7	742	68	628	50	94	125	1464
6)	ತುಮಕೂರು	4	508	89	762	40	38	133	1308
ಬೆಳಗಾಂ ವಿಭಾಗ:									
1)	ಬೆಳಗಾಂ	9	1060	122	880	13	36	144	1976
2)	ಬಿಜಾಪುರ	12	906	96	722	4	60	112	1688
3)	ಧಾರವಾಡ	17	1901	95	778	34	55	146	2734
4)	ಉತ್ತರ ಕನ್ನಡ	11	636	57	426	20	50	88	1112
ಗುಲ್ಬರ್ಗಾ ವಿಭಾಗ :									
1)	ಬಳ್ಳಾರಿ	12	1350	60	441	23	4	95	1795
2)	ಬೀದರ್	5	443	40	294	14	47	59	784
3)	ಗುಲ್ಬರ್ಗಾ	12	1190	94	670	24	60	130	1920
4)	ರಾಯಚೂರು	9	478	76	672	8	-	93	1100
ಮೈಸೂರು ವಿಭಾಗ :									
1)	ಚಿಕ್ಕಮಗಳೂರು	5	479	45	466	42	44	92	989
2)	ದಕ್ಷಿಣಕನ್ನಡ	10	1656	120	975	16	10	146	2641
3)	ಹಾಸನ	7	820	72	669	53	120	132	1669
4)	ಕೊಡಗು	8	950	29	329	4	-	41	1279
5)	ಮಂಡ್ಯ	6	558	61	664	38	366	105	1258
6)	ಮೈಸೂರು	9	2207	133	1223	56	172	198	3602
	ಒಟ್ಟು ರಾಜ್ಯದಲ್ಲಿ	176	23,213	1509	13,190	596	954	12,281	37357